सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ರಾಷ್ಟ್ರೀಯ ಮಹಿಳಾ ಆಯೋಗ ಅಧಿನಿಯಮ, 1990

(1990ರ ಅಧಿನಿಯಮ ಸಂಖ್ಯೆ 20)

[ಏಪ್ರಿಲ್ 19, 2004 ರಂದು ಜಾರಿಯಲ್ಲಿದ್ದಂತೆ]

# THE NATIONAL COMMISSION FOR WOMEN ACT, 1990

(Act No. 20 of 1990)

[As on 19th April 2004]

ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.

2004

# ರಾಷ್ಟ್ರೀಯ ಮಹಿಳಾ ಆಯೋಗ ಅಧಿನಿಯಮ, 1990

(1990ರ ಅಧಿನಿಯಮ ಸಂಖ್ಯೆ 20)

[ಏಪ್ರಿಲ್ 19, 2004 ರಂದು ಜಾರಿಯಲ್ಲಿದ್ದಂತೆ]

# THE NATIONAL COMMISSION FOR WOMEN ACT, 1990

(Act No. 20 of 1990)

[As on 19th April 2004]

# ರಾಷ್ಟ್ರೀಯ ಮಹಿಳಾ ಆಯೋಗ ಅಧಿನಿಯಮ, 1990

(1990ರ ಅಧಿನಿಯಮ ಸಂಖ್ಯೆ 20)

ವಿಷಯಾನುಕ್ರಮಣಿಕೆ

## ಅಧ್ಯಾಯ- I

### ಪ್ರಾರಂಭಿಕ


ಪ್ರಕರಣಗಳು: ಪುಟ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ 01
2. ಪರಿಭಾಷೆಗಳು 01


## ಅಧ್ಯಾಯ- II

### ರಾಷ್ಟ್ರೀಯ ಮಹಿಳಾ ಆಯೋಗ


3. ರಾಷ್ಟ್ರೀಯ ಮಹಿಳಾ ಆಯೋಗದ ರಚನೆ 01
4. ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು 01
5. ಆಯೋಗದ ಅಧಿಕಾರಿಗಳು ಮತ್ತು ಇತರ ನೌಕರರು 02
6. ಸಂಬಳಗಳನ್ನು ಮತ್ತು ಭತ್ಯೆಗಳನ್ನು ಅನುದಾನಗಳಿಂದ ಸಂದಾಯ ಮಾಡುವುದು 02
7. ಖಾಲಿ ಸ್ಥಾನಗಳು ಮುಂತಾದ ಕಾರಣಗಳಿಂದಾಗಿ ಆಯೋಗದ ವ್ಯವಹರಣೆಗಳು ಅಸಿಂಧುಗೊಳ್ಳದಿರುವುದು 02
8. ಆಯೋಗದ ಸಮಿತಿಗಳು 02
9. ಆಯೋಗವು ಕಾರ್ಯ ವಿಧಾನವನ್ನು ವಿನಿಯಮಿಸುವುದು 02


## ಅಧ್ಯಾಯ- III

### ಆಯೋಗದ ಪ್ರಕಾರ್ಯಗಳು


10. ಆಯೋಗದ ಪ್ರಕಾರ್ಯಗಳು 03


## ಅಧ್ಯಾಯ- IV

### ಹಣಕಾಸು, ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ


11. ಕೇಂದ್ರ ಸರ್ಕಾರದ ಅನುದಾನಗಳು 04
12. ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆ 04
13. ವಾರ್ಷಿಕ ವರದಿ 05
14. ವಾರ್ಷಿಕ ವರದಿಯನ್ನು ಮತ್ತು ಲೆಕ್ಕ ಪರಿಶೋಧನಾ ವರದಿಯನ್ನು ಸಂಸತ್ತಿನ ಮುಂದೆ ಮಂಡಿಸುವುದು 05


## ಅಧ್ಯಾಯ- V

### ಸಂಕೀರ್ಣ


15. ಆಯೋಗದ ಅಧ್ಯಕ್ಷರು, ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಲೋಕ ನೌಕರರಾಗಿರುವುದು 05
16. ಕೇಂದ್ರ ಸರ್ಕಾರವು ಆಯೋಗದೊಡನೆ ಸಮಾಲೋಚಿಸುವುದು 05
17. ನಿಯಮ ರಚನಾಧಿಕಾರ 05

# ರಾಷ್ಟ್ರೀಯ ಮಹಿಳಾ ಆಯೋಗ ಅಧಿನಿಯಮ, 1990

[1990ರ 20]

[30ನೇ ಆಗಸ್ಟ್, 1990]

19.4.2004 ರಂದು ಜಾರಿಯಲ್ಲಿದ್ದಂತೆ ರಾಷ್ಟ್ರೀಯ ಮಹಿಳಾ ಆಯೋಗ ಅಧಿನಿಯಮ, 1990ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ. ಮತ್ತು ಇದನ್ನು 19.4.2004ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 29ನೇ ಸಂಪುಟದ, 2ನೇ ಸಂಚಿಕೆಯಲ್ಲಿ 73 ರಿಂದ 78 ರವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಮಹಿಳೆಯರಿಗಾಗಿ ಒಂದು ರಾಷ್ಟ್ರೀಯ ಆಯೋಗವನ್ನು ಸೃಜಿಸುವ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ನಲವತ್ತೊಂದನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

## ಅಧ್ಯಾಯ- I

### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ :- (1) ಈ ಅಧಿನಿಯಮವನ್ನು ರಾಷ್ಟ್ರೀಯ ಮಹಿಳಾ ಆಯೋಗ ಅಧಿನಿಯಮ, 1990 ಎಂದು ಕರೆಯತಕ್ಕುದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಭಾರತದಾದ್ಯಂತ ವ್ಯಾಪ್ತವಾಗತಕ್ಕುದು.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕುದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು,-

(ಎ) "ಆಯೋಗ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಲಾದ ರಾಷ್ಟ್ರೀಯ ಮಹಿಳಾ ಆಯೋಗ;

(ಬಿ) "ಸದಸ್ಯ" ಎಂದರೆ ಆಯೋಗದ ಸದಸ್ಯ ಮತ್ತು ಅದರಲ್ಲಿ ಸದಸ್ಯ-ಕಾರ್ಯದರ್ಶಿಯು ಒಳಗೊಳ್ಳುತ್ತಾನೆ;

(ಸಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು.

## ಅಧ್ಯಾಯ - II

### ರಾಷ್ಟ್ರೀಯ ಮಹಿಳಾ ಆಯೋಗ

3. ರಾಷ್ಟ್ರೀಯ ಮಹಿಳಾ ಆಯೋಗದ ರಚನೆ :- (1) ಕೇಂದ್ರ ಸರ್ಕಾರವು ರಾಷ್ಟ್ರೀಯ ಮಹಿಳಾ ಆಯೋಗವೆಂದು ಕರೆಯಲಾಗುವ ಒಂದು ನಿಕಾಯವನ್ನು ರಚಿಸತಕ್ಕುದು, ಮತ್ತು ಆ ನಿಕಾಯವು ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ವಹಿಸಿಕೊಟ್ಟ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

(2) ಆಯೋಗವು ಕೆಳಕಂಡವರನ್ನು ಒಳಗೊಂಡಿರತಕ್ಕುದು:-

(ಎ) ಮಹಿಳೆಯರ ಹಿತರಕ್ಷಣೆಗೆ ಬದ್ಧನಾದ ಮತ್ತು ಕೇಂದ್ರ ಸರ್ಕಾರದಿಂದ ನಾಮನಿರ್ದೇಶನಗೊಳ್ಳಬೇಕಾದ ಅಧ್ಯಕ್ಷ;

(ಬಿ) ಕಾನೂನು ಅಥವಾ ಕಾನೂನು ರಚನೆ, ಕಾರ್ಮಿಕ ಸಂಘಟನಾ ಕಾರ್ಯದಲ್ಲಿ, ಮಹಿಳೆಯರಿಗೆ ಹೆಚ್ಚು ಹೆಚ್ಚು ಉದ್ಯೋಗಾವಕಾಶವನ್ನು ಕಲ್ಪಿಸುವಂಥ ಕೈಗಾರಿಕೆಯ ಅಥವಾ ಸಂಘಟನೆಯ ವ್ಯವಸ್ಥಾಪನೆ, (ಮಹಿಳಾ ಕಾರ್ಯಕರ್ತೆಯರು ಒಳಗೊಂಡಿರುವ) ಮಹಿಳೆಯರ ಸ್ವಯಂ ಸೇವಾ ಸಂಸ್ಥೆಗಳಲ್ಲಿ, ಆಡಳಿತ, ಆರ್ಥಿಕ ಅಭಿವೃದ್ಧಿ, ಆರೋಗ್ಯ, ಶಿಕ್ಷಣ ಅಥವಾ ಸಮಾಜ ಕಲ್ಯಾಣ ಕ್ಷೇತ್ರಗಳಲ್ಲಿ ಅನುಭವ ಹೊಂದಿರುವ, ಸಮರ್ಥರಾದ, ನಿಷ್ಠಾವಂತರಾದ ಮತ್ತು ಪ್ರತಿಷ್ಠಿತರಾದ ವ್ಯಕ್ತಿಗಳ ಪೈಕಿ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ ಐವರು ಸದಸ್ಯರು:

ಪರಂತು, ಅಂಥ ವ್ಯಕ್ತಿಗಳ ಪೈಕಿ ಕನಿಷ್ಠ ಪಕ್ಷ ಒಬ್ಬನು ಪರಿಶಿಷ್ಟ ಜಾತಿಯವನಾಗಿರಬೇಕು ಮತ್ತು ಇನ್ನೊಬ್ಬನು ಪರಿಶಿಷ್ಟ ಪಂಗಡಕ್ಕೆ ಸೇರಿದವನಾಗಿರಬೇಕು;

(ಸಿ) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಒಬ್ಬ ಸದಸ್ಯ- ಕಾರ್ಯದರ್ಶಿ; ಅವರು,-

(i) ವ್ಯವಸ್ಥಾಪನೆ, ಸಂಘಟನಾ ಸ್ವರೂಪ ಅಥವಾ ಸಾಮಾಜಿಕ ಚಳುವಳಿ ಕ್ಷೇತ್ರದಲ್ಲಿ ತಜ್ಞರಾಗಿರತಕ್ಕುದು; ಅಥವಾ

(ii) ಒಕ್ಕೂಟದ ಸಿವಿಲ್ ಸೇವೆಯ ಅಥವಾ ಅಖಿಲ ಭಾರತ ಸೇವೆಯ ಸದಸ್ಯನಾಗಿರುವ ಅಧಿಕಾರಿ ಅಥವಾ ಸೂಕ್ತ ಅನುಭವ ಹೊಂದಿರುವ, ಹಾಗೂ ಒಕ್ಕೂಟದ ಅಧೀನದಲ್ಲಿ ಸಿವಿಲ್ ಹುದ್ದೆಯನ್ನು ಧಾರಣ ಮಾಡಿರುವ ಅಧಿಕಾರಿಯಾಗಿರತಕ್ಕುದು.

4. ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು:- (1) ಅಧ್ಯಕ್ಷನು ಮತ್ತು ಪ್ರತಿಯೊಬ್ಬ ಸದಸ್ಯನು ಈ ಬಗ್ಗೆ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಮೂರು ವರ್ಷಗಳಿಗೆ ಮೀರದ ಅವಧಿಯವರೆಗೆ ಪದಧಾರಣ ಮಾಡತಕ್ಕುದು.

(2) ಅಧ್ಯಕ್ಷನು ಅಥವಾ (ಒಕ್ಕೂಟದ ಸಿವಿಲ್ ಸೇವೆಯ ಅಥವಾ ಅಖಿಲ ಭಾರತ ಸೇವೆಯ ಸದಸ್ಯನಾಗಿರುವ ಅಥವಾ ಒಕ್ಕೂಟದ ಅಧೀನದಲ್ಲಿ ಸಿವಿಲ್ ಹುದ್ದೆಯನ್ನು ಧಾರಣ ಮಾಡಿರುವ ಸದಸ್ಯ- ಕಾರ್ಯದರ್ಶಿಯನ್ನು ಹೊರತುಪಡಿಸಿ) ಸದಸ್ಯನು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಅಧ್ಯಕ್ಷ ಪದಕ್ಕೆ ಅಥವಾ ಸಂದರ್ಭಾನುಸಾರ, ಸದಸ್ಯ ಪದಕ್ಕೆ ಯಾವುದೇ ಸಮಯದಲ್ಲಿ ರಾಜೀನಾಮೆ ನೀಡಬಹುದು.

(3) ಕೇಂದ್ರ ಸರ್ಕಾರವು, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅಧ್ಯಕ್ಷನ ಅಥವಾ ಸದಸ್ಯನ ಪದವನ್ನು ಧಾರಣ ಮಾಡಿರುವ ವ್ಯಕ್ತಿಯು,-

(ಎ) ಅವಿಮುಕ್ತ ದಿವಾಳಿಯಾಗಿದ್ದರೆ;

(ಬಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧ:ಪತನವನ್ನೊಳಗೊಂಡ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿ ಕಾರಾವಾಸ ಶಿಕ್ಷೆಗೆ ಗುರಿಯಾಗಿದ್ದರೆ;

(ಸಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯವು ಘೋಷಿಸಿದ್ದರೆ;

(ಡಿ) ಕಾರ್ಯ ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯ ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಇ) ಆಯೋಗದಿಂದ, ಗೈರು ಹಾಜರಿ ರಜೆ ಪಡೆಯದೆ, ಆಯೋಗದ ನಿರಂತರ ಮೂರು ಸಭೆಗಳಿಗೆ ಗೈರು ಹಾಜರಾಗಿದ್ದರೆ; ಅಥವಾ

(ಎಫ್) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ಅವನು ಅಧ್ಯಕ್ಷನ ಅಥವಾ ಸದಸ್ಯನ ಪದದಲ್ಲಿ ಮುಂದುವರಿದರೆ ಸಾರ್ವಜನಿಕ ಹಿತಕ್ಕೆ ಧಕ್ಕೆಯಾಗುತ್ತದೆನ್ನುವ ಹಾಗೆ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದರೆ

- ಅಂಥ ವ್ಯಕ್ತಿಯನ್ನು ಪದದಿಂದ ತೆಗೆದುಹಾಕತಕ್ಕುದು:

ಪರಂತು, ಯಾರೇ ವ್ಯಕ್ತಿಗೆ, ಆ ವಿಷಯದಲ್ಲಿ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿದ್ದ ಹೊರತು ಈ ಖಂಡದ ಮೇರೆಗೆ ಅವನನ್ನು ತೆಗೆದು ಹಾಕತಕ್ಕುದಲ್ಲ.

(4) (2)ನೇ ಉಪಪ್ರಕರಣದ ಮೇರೆಗೆ ಅಥವಾ ಅನ್ಯಥಾ ಯಾವುದೇ ಸ್ಥಾನವು ಖಾಲಿಯಾದರೆ, ಅದನ್ನು ಹೊಸ ನಾಮನಿರ್ದೇಶನದ ಮೂಲಕ ಭರ್ತಿ ಮಾಡತಕ್ಕುದು.

(5) ಅಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಸಂದಾಯವಾಗಬೇಕಾದ ಸಂಬಳ ಮತ್ತು ಭತ್ಯೆಗಳು, ಮತ್ತು ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ನಿಯಮಿಸಬಹುದಾದಂತೆ ಇರತಕ್ಕುದು.

5. ಆಯೋಗದ ಅಧಿಕಾರಿಗಳು ಮತ್ತು ಇತರ ನೌಕರರು:- (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ಆಯೋಗದ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಅವಶ್ಯವಿರಬಹುದಾದಂಥ ಅಧಿಕಾರಿಗಳನ್ನು ಮತ್ತು ನೌಕರರನ್ನು ಆಯೋಗಕ್ಕೆ ಒದಗಿಸತಕ್ಕುದು.

(2) ಆಯೋಗದ ಉದ್ದೇಶಕ್ಕಾಗಿ ನೇಮಿಸಲಾದ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಸಂದಾಯ ಮಾಡಬೇಕಾದ ಸಂಬಳಗಳು ಮತ್ತು ಭತ್ಯೆಗಳು, ಮತ್ತು ಅವರ ಸೇವೆಯ ಇತರ ನಿಬಂಧನೆ ಮತ್ತು ಷರತ್ತುಗಳು, ನಿಯಮಿಸಬಹುದಾದಂತೆ ಇರತಕ್ಕುದು.

6. ಸಂಬಳಗಳನ್ನು ಮತ್ತು ಭತ್ಯೆಗಳನ್ನು ಅನುದಾನಗಳಿಂದ ಸಂದಾಯ ಮಾಡುವುದು:- ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳನ್ನು ಮತ್ತು 5ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಸಂದಾಯ ಮಾಡಬೇಕಾದ ಸಂಬಳ, ಭತ್ಯೆಗಳು ಮತ್ತು ನಿವೃತ್ತಿ ವೇತನಗಳೂ ಸೇರಿದಂತೆ ಆಡಳಿತ ವೆಚ್ಚಗಳನ್ನು, 11ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅನುದಾನಗಳಿಂದ ಸಂದಾಯ ಮಾಡತಕ್ಕುದು.

7. ಖಾಲಿ ಸ್ಥಾನಗಳು ಮುಂತಾದ ಕಾರಣಗಳಿಂದ ಆಯೋಗದ ವ್ಯವಹರಣೆಗಳು ಅಸಿಂಧುಗೊಳ್ಳದಿರುವುದು:- ಆಯೋಗದಲ್ಲಿ ಯಾವುದೇ ಸ್ಥಾನವು ತೆರವಾದ ಕಾರಣ ಅಥವಾ ಆಯೋಗದ ರಚನೆಯಲ್ಲಿನ ಯಾವುದೇ ದೋಷ ಮಾತ್ರದಿಂದ ಆಯೋಗದ ಯಾವುದೇ ಕೃತ್ಯವನ್ನು ಅಥವಾ ವ್ಯವಹರಣೆಯನ್ನು ಪ್ರಶ್ನಿಸತಕ್ಕುದಲ್ಲ ಅಥವಾ ಅದು ಅಸಿಂಧುಗೊಳ್ಳತಕ್ಕುದಲ್ಲ.

8. ಆಯೋಗದ ಸಮಿತಿಗಳು:- (1) ಆಯೋಗವು, ತಾನು ಕಾಲಕಾಲಕ್ಕೆ ಕೈಗೆತ್ತಿಕೊಳ್ಳಬಹುದಾದಂಥ ವಿಶೇಷ ಅಂಶಗಳ ಬಗ್ಗೆ ವ್ಯವಹರಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ಸಮಿತಿಗಳನ್ನು ನೇಮಕ ಮಾಡಬಹುದು.

(2) ಆಯೋಗವು, (1)ನೇ ಉಪಪ್ರಕರಣದ ಮೇರೆಗೆ ನೇಮಿಸಲಾದ ಯಾವುದೇ ಸಮಿತಿಗೆ, ಆಯೋಗದ ಸದಸ್ಯರಲ್ಲದ ಮತ್ತು ಅದು ಸೂಕ್ತವೆಂದು ಯೋಚಿಸುವಷ್ಟು ವ್ಯಕ್ತಿಗಳನ್ನು ಸಹ- ಸದಸ್ಯರನ್ನಾಗಿ ಸೇರಿಸಿಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕುದು ಮತ್ತು ಹಾಗೆ ಸಹ- ಸದಸ್ಯರಾಗಿ ಸೇರಿಸಿಕೊಳ್ಳಲಾದ ವ್ಯಕ್ತಿಗಳು, ಸಮಿತಿಯ ಸಭೆಗಳಿಗೆ ಹಾಜರಾಗುವ ಮತ್ತು ಅದರ ವ್ಯವಹರಣೆಗಳಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರತಕ್ಕುದು, ಆದರೆ ಅವರಿಗೆ ಮತದಾನದ ಹಕ್ಕು ಇರತಕ್ಕುದಲ್ಲ.

(3) ಹಾಗೆ ಸಹ- ಸದಸ್ಯರಾಗಿ ಸೇರಿಸಿಕೊಳ್ಳಲಾದ ವ್ಯಕ್ತಿಗಳು ಸಮಿತಿಯ ಸಭೆಗಳಿಗೆ ಹಾಜರಾದುದಕ್ಕೆ ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯಲು ಅರ್ಹರಾಗಿರತಕ್ಕುದು.

9. ಆಯೋಗವು ಕಾರ್ಯ ವಿಧಾನವನ್ನು ವಿನಿಯಮಿಸುವುದು:- (1) ಆಯೋಗವು ಅಥವಾ ಅದರ ಸಮಿತಿಯು ಅವಶ್ಯವಿದ್ದಾಗಲೆಲ್ಲಾ ಮತ್ತು ಅಧ್ಯಕ್ಷರು ಸೂಕ್ತವೆಂದು ಯೋಚಿಸಬಹುದಾದ ಸಮಯದಲ್ಲಿ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕುದು.

(2) ಆಯೋಗವು, ತನ್ನದೇ ಆದ ಕಾರ್ಯ ವಿಧಾನವನ್ನು ಮತ್ತು ತನ್ನ ಸಮಿತಿಗಳ ಕಾರ್ಯ ವಿಧಾನವನ್ನು ವಿನಿಯಮಿಸತಕ್ಕುದು.

(3) ಆಯೋಗದ ಎಲ್ಲ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಸದಸ್ಯ -ಕಾರ್ಯದರ್ಶಿಯು ಅಥವಾ ಅವರು ಈ ಬಗ್ಗೆ ಯುಕ್ತವಾಗಿ ಅಧಿಕೃತಗೊಳಿಸಿದ ಆಯೋಗದ ಯಾರೇ ಇತರ ಅಧಿಕಾರಿಯು ಅಧಿಪ್ರಮಾಣನಗೊಳಿಸತಕ್ಕುದು.

## ಅಧ್ಯಾಯ - III

### ಆಯೋಗದ ಪ್ರಕಾರ್ಯಗಳು

10. ಆಯೋಗದ ಪ್ರಕಾರ್ಯಗಳು:- (1) ಆಯೋಗವು ಈ ಕೆಳಕಂಡ ಎಲ್ಲ ಪ್ರಕಾರ್ಯಗಳನ್ನು ಅಥವಾ ಆ ಪೈಕಿ ಯಾವುದೇ ಪ್ರಕಾರ್ಯವನ್ನು ನಿರ್ವಹಿಸತಕ್ಕುದು, ಎಂದರೆ:-

(ಎ) ಸಂವಿಧಾನ ಮತ್ತು ಇತರ ಕಾನೂನುಗಳ ಮೇರೆಗೆ ಮಹಿಳೆಯರಿಗೆ ಒದಗಿಸಲಾದ ಸುರಕ್ಷಾ ಕ್ರಮಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ತನಿಖೆ ಮಾಡುವುದು ಮತ್ತು ಪರಿಶೀಲಿಸುವುದು;

(ಬಿ) ಆ ಸುರಕ್ಷಾ ಕ್ರಮಗಳ ಅನುಷ್ಠಾನಕ್ಕೆ ಸಂಬಂಧಪಟ್ಟ ವರದಿಗಳನ್ನು ವಾರ್ಷಿಕವಾಗಿ ಮತ್ತು ಆಯೋಗವು ಸೂಕ್ತವೆಂದು ಭಾವಿಸಬಹುದಾದಂಥ ಸಮಯಗಳಲ್ಲಿ ಕೇಂದ್ರ ಸರ್ಕಾರಕ್ಕೆ ಒಪ್ಪಿಸುವುದು;

(ಸಿ) ಒಕ್ಕೂಟ ಸರ್ಕಾರವು ಅಥವಾ ಯಾವುದೇ ರಾಜ್ಯ ಸರ್ಕಾರವು ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕಾಗಿ ಅಂಥ ಸುರಕ್ಷಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗ್ಗೆ ಅಂಥ ವರದಿಗಳಲ್ಲಿ ಶಿಫಾರಸುಗಳನ್ನು ಮಾಡುವುದು;

(ಡಿ) ಮಹಿಳೆಯರಿಗೆ ಸಂಬಂಧಪಡುವ ಸಂವಿಧಾನದ ಮತ್ತು ಇತರ ಕಾನೂನುಗಳ ಹಾಲಿ ಉಪಬಂಧಗಳನ್ನು ಕಾಲಕಾಲಕ್ಕೆ ಪುನರವಲೋಕನ ಮಾಡುವುದು ಮತ್ತು ಅಂಥ ಕಾನೂನುಗಳಲ್ಲಿರುವ ಯಾವುವೇ ಲೋಪಗಳನ್ನು, ನ್ಯೂನತೆಗಳನ್ನು ಅಥವಾ ಕೊರತೆಗಳನ್ನು ಸರಿಪಡಿಸಲು ಕಾನೂನು ಪರಿಹಾರ ಕ್ರಮಗಳನ್ನು ಸೂಚಿಸುವ ಸಲುವಾಗಿ ಆ ಉಪಬಂಧಗಳಿಗೆ ಮಾಡಬೇಕಾದ ತಿದ್ದುಪಡಿಗಳನ್ನು ಶಿಫಾರಸು ಮಾಡುವುದು;

(ಇ) ಮಹಿಳೆಯರಿಗೆ ಸಂಬಂಧಿಸಿದ ಸಂವಿಧಾನದ ಮತ್ತು ಇತರೆ ಕಾನೂನುಗಳ ಉಪಬಂಧಗಳ ಉಲ್ಲಂಘನೆಯ ಪ್ರಕರಣಗಳ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಗಳ ಜೊತೆಯಲ್ಲಿ ವ್ಯವಹರಿಸುವುದು;

(ಎಫ್) ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದ ದೂರುಗಳನ್ನು ಪರಿಶೀಲಿಸುವುದು ಮತ್ತು ಆ ಬಗ್ಗೆ ಸ್ವತ: ಗಮನಹರಿಸುವುದು-

(i) ಮಹಿಳೆಯರ ಹಕ್ಕುಗಳನ್ನು ಹರಣ ಮಾಡುವುದು;

(ii) ಮಹಿಳೆಯರಿಗೆ ರಕ್ಷಣೆ ಒದಗಿಸಲು ಮತ್ತು ಸಮಾನತೆ ಹಾಗೂ ಅಭಿವೃದ್ಧಿಯ ಉದ್ದೇಶವನ್ನು ಸಾಧಿಸಲು ರಚಿಸಲಾದ ಕಾನೂನುಗಳನ್ನು ಜಾರಿಗೊಳಿಸದಿರುವುದು;

(iii) ಮಹಿಳೆಯರ ತೊಂದರೆಗಳನ್ನು ನಿವಾರಿಸಲು ಮತ್ತು ಅವರ ಕಲ್ಯಾಣವನ್ನು ಖಚಿತಪಡಿಸಲು ಮತ್ತು ಅವರಿಗೆ ಪರಿಹಾರ ಒದಗಿಸಲು ರೂಪಿಸಲಾದ ಕಾರ್ಯನೀತಿ ತೀರ್ಮಾನಗಳನ್ನು, ಮಾರ್ಗದರ್ಶನ ಸೂತ್ರಗಳನ್ನು ಅಥವಾ ಆಜ್ಞೆಗಳನ್ನು ಪಾಲಿಸದಿರುವುದು ಮತ್ತು ಅಂಥ ವಿಷಯಗಳಿಂದ ಉದ್ಭವಿಸುವ ವಿವಾದಾಂಶಗಳ ಬಗ್ಗೆ ಸಮುಚಿತ ಪ್ರಾಧಿಕಾರಗಳೊಂದಿಗೆ ವ್ಯವಹರಿಸುವುದು;

(ಜಿ) ಮಹಿಳೆಯರ ವಿರುದ್ಧದ ತಾರತಮ್ಯ ಮತ್ತು ದೌರ್ಜನ್ಯ ಇವುಗಳಿಂದ ಉಂಟಾಗುವ ನಿರ್ದಿಷ್ಟ ಸಮಸ್ಯೆಗಳನ್ನು ಮತ್ತು ಸನ್ನಿವೇಶಗಳನ್ನು ಕುರಿತು ವಿಶೇಷ ಅಧ್ಯಯನಗಳನ್ನು ಅಥವಾ ತನಿಖೆಗಳನ್ನು ತರಿಸಿಕೊಳ್ಳುವುದು ಮತ್ತು ಅವುಗಳ ನಿವಾರಣೆಗೆ ಕಾರ್ಯ ತಂತ್ರಗಳನ್ನು ಶಿಫಾರಸು ಮಾಡಲು ಸಾಧ್ಯವಾಗುವಂತೆ ನಿರ್ಬಂಧಗಳನ್ನು ಗುರುತಿಸುವುದು;

(ಎಚ್) ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಸೂಕ್ತ ಪ್ರಾತಿನಿಧ್ಯವನ್ನು ಸುನಿಶ್ಚಿತಗೊಳಿಸುವ ಮಾರ್ಗಗಳನ್ನು ಸೂಚಿಸಲು ಸಾಧ್ಯವಾಗುವಂತೆ ಸಂವರ್ಧಕ ಮತ್ತು ಶೈಕ್ಷಣಿಕ ಸಂಶೋಧನೆಗಳನ್ನು ಕೈಕೊಳ್ಳುವುದು ಮತ್ತು ಮನೆ ಮತ್ತು ಮೂಲ ಸೌಕರ್ಯಗಳ ಕೊರತೆ, ಗುಲಾಮ ಚಾಕರಿ ಹಾಗೂ ವೃತ್ತಿಯಲ್ಲಿ ಆರೋಗ್ಯಕ್ಕೆ ಉಂಟಾಗುವ ಅಪಾಯಗಳನ್ನು ಕಡಿಮೆ ಮಾಡಲು ಮತ್ತು ಅವರ ಉತ್ಪಾದಕತೆಯನ್ನು ಹೆಚ್ಚಿಸಲು ಅಗತ್ಯವಿರುವ ಪೂರಕ ಸೇವೆಗಳು ಮತ್ತು ತಂತ್ರಜ್ಞಾನ ಅಸಮರ್ಪಕವಾಗಿರುವುದೇ ಮುಂತಾದ ಅವರ ಅಭಿವೃದ್ಧಿಗೆ ಅಡ್ಡಿ ಉಂಟು ಮಾಡಲು ಕಾರಣವಾದ ಅಂಶಗಳನ್ನು ಗುರುತಿಸುವುದು;

(ಐ) ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಯೋಜನೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಮತ್ತು ಆ ಸಂಬಂಧದಲ್ಲಿ ಸಲಹೆ ನೀಡುವುದು;

(ಜೆ) ಒಕ್ಕೂಟ ಸರ್ಕಾರದ ಮತ್ತು ಯಾವುದೇ ರಾಜ್ಯದ ಅಧೀನದಲ್ಲಿ ಆಗಿರುವ ಮಹಿಳೆಯರ ಅಭಿವೃದ್ಧಿಯ ಪ್ರಗತಿಯ ಮೌಲ್ಯ ಮಾಪನ ಮಾಡುವುದು;

(ಕೆ) ಮಹಿಳೆಯರನ್ನು ಕೈದಿಗಳನ್ನಾಗಿ ಅಥವಾ ಅನ್ಯಥಾ ರೀತಿಯಲ್ಲಿ ಅಭಿರಕ್ಷೆಯಲ್ಲಿಟ್ಟಿರುವ ಜೈಲು, ರಿಮ್ಯಾಂಡ್‌ಹೋಂ, ಮಹಿಳೆಯರ ಸಂಸ್ಥೆ ಅಥವಾ ಇತರ ಸ್ಥಳಗಳನ್ನು ಪರಿಶೀಲಿಸುವುದು ಅಥವಾ ಪರಿಶೀಲಿಸಲು ಕ್ರಮಕೈಕೊಳ್ಳುವುದು, ಮತ್ತು ಪರಿಹಾರ ಕ್ರಮಗಳೇನಾದರೂ ಅಗತ್ಯವೆಂದು ಕಂಡುಬಂದಲ್ಲಿ ಆ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಗಳೊಂದಿಗೆ ವ್ಯವಹರಿಸುವುದು;

(ಎಲ್) ಬಹಳಷ್ಟು ಸಂಬಂಧಪಟ್ಟ ವಿವಾದಾಂಶಗಳನ್ನು ಮಹಿಳೆಯರಿಗೆ ಒಳಗೊಂಡ ವ್ಯಾಜ್ಯಗಳಿಗೆ ಹಣ ಸಹಾಯ ಒದಗಿಸುವುದು;

(ಎಂ) ಮಹಿಳೆಯರಿಗೆ ಮತ್ತು ಅದರಲ್ಲೂ ವಿಶೇಷವಾಗಿ ಮಹಿಳೆಯರು ಅನುಭವಿಸುವ ಕೋಟಲೆಗಳಿಗೆ ಸಂಬಂಧಪಟ್ಟಂತೆ ಸರ್ಕಾರಕ್ಕೆ ನಿಯತಕಾಲಿಕ ವರದಿಗಳನ್ನು ಕಳುಹಿಸುವುದು;

(ಎನ್) ಕೇಂದ್ರ ಸರ್ಕಾರವು ಆಯೋಗಕ್ಕೆ ಒಪ್ಪಿಸಬಹುದಾದ ಯಾವುದೇ ಇತರೆ ವಿಷಯ.

(2) ಕೇಂದ್ರ ಸರ್ಕಾರವು, ಕೇಂದ್ರಕ್ಕೆ ಸಂಬಂಧಿಸಿದಂತೆ ಶಿಫಾರಸುಗಳ ಬಗ್ಗೆ ತೆಗೆದುಕೊಂಡ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮವನ್ನು ವಿವರಿಸುವ ಜ್ಞಾಪನ ಪತ್ರವನ್ನು ಮತ್ತು ಅಂಥ ಶಿಫಾರಸುಗಳ ಪೈಕಿ ಯಾವುದೇ ಶಿಫಾರಸನ್ನು ಅಂಗೀಕರಿಸದಿದ್ದರೆ ಅದಕ್ಕೆ ಕಾರಣಗಳ ಸಹಿತ, (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿದ ಎಲ್ಲ ವರದಿಗಳನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸಲು ಕ್ರಮ ಕೈಕೊಳ್ಳತಕ್ಕುದು.

(3) ಅಂಥ ಯಾವುದೇ ವರದಿಯು ಅಥವಾ ಅದರ ಯಾವುದೇ ಭಾಗವು ಯಾವುದೇ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ಯಾವುದೇ ವಿಷಯಕ್ಕೆ ಸಂಬಂಧಿಸಿರುವಲ್ಲಿ ಆಯೋಗವು, ಅಂಥ ವರದಿಯ ಅಥವಾ ಅಂಥ ಭಾಗದ ಒಂದು ಪ್ರತಿಯನ್ನು ಅಂಥ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಆ ರಾಜ್ಯ ಸರ್ಕಾರವು ರಾಜ್ಯಕ್ಕೆ ಸಂಬಂಧಿಸಿದ ಶಿಫಾರಸುಗಳ ಮೇರೆಗೆ ತೆಗೆದುಕೊಂಡ ಕ್ರಮದ ಬಗ್ಗೆ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಮತ್ತು ಅಂಥ ಶಿಫಾರಸುಗಳ ಪೈಕಿ, ಯಾವುದನ್ನಾದರೂ ಅಂಗೀಕರಿಸದಿದ್ದರೆ ಆ ಬಗ್ಗೆ ಕಾರಣಗಳನ್ನು ವಿವರಿಸುವ ಒಂದು ಜ್ಞಾಪನಪತ್ರದೊಂದಿಗೆ ಆ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲು ಕ್ರಮ ಕೈಕೊಳ್ಳತಕ್ಕುದು.

(4) ಆಯೋಗವು, (ಎ) ಖಂಡದಲ್ಲಿ ಅಥವಾ (1)ನೇ ಉಪಪ್ರಕರಣದ (ಎಫ್) ಖಂಡದ (1)ನೇ ಉಪಖಂಡದಲ್ಲಿ ಉಲ್ಲೇಖಿಸಿರುವ ಯಾವುದೇ ವಿಷಯವನ್ನು ತನಿಖೆ ಮಾಡುವಲ್ಲಿ, ದಾವೆಯನ್ನು ಅಧಿ ವಿಚಾರಣೆ ಮಾಡುವಾಗ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ ಸಿವಿಲ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ:-

(ಎ) ಭಾರತದ ಯಾವುದೇ ಭಾಗದಿಂದ ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಪ್ರಮಾಣ ಮಾಡಿಸಿ ಅವನನ್ನು ಪರೀಕ್ಷಿಸುವುದು;

(ಬಿ) ಯಾವುದೇ ದಸ್ತಾವೇಜುಗಳನ್ನು ಶೋಧಿಸಲು ಮತ್ತು ಹಾಜರುಪಡಿಸಲು ಅಗತ್ಯ ಪಡಿಸುವುದು;

(ಸಿ) ಶಪಥಪತ್ರಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಯಾವುದೇ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರ ಮತ್ತು ದಸ್ತಾವೇಜುಗಳ ಪರೀಕ್ಷೆಗಾಗಿ ಕಮಿಷನ್‌ಗಳನ್ನು ಹೊರಡಿಸುವುದು; ಮತ್ತು

(ಎಫ್) ನಿಯಮಿಸಬಹುದಾದ ಯಾವುದೇ ಇತರೆ ವಿಷಯಗಳು.

## ಅಧ್ಯಾಯ - IV

## ಹಣಕಾಸು, ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ

11. ಕೇಂದ್ರ ಸರ್ಕಾರದ ಅನುದಾನಗಳು:- (1) ಕೇಂದ್ರ ಸರ್ಕಾರವು, ಈ ಬಗ್ಗೆ ಸಂಸತ್ತು ಕಾನೂನಿನ ಮೂಲಕ ಮಾಡಿದ ಯುಕ್ತ ವಿನಿಯೋಗದ ತರುವಾಯ, ಈ ಅಧಿನಿಯಮದ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರವು ಯುಕ್ತವೆಂದು ಯೋಚಿಸಬಹುದಾದಷ್ಟು ಹಣದ ಮೊತ್ತಗಳನ್ನು ಅನುದಾನಗಳ ರೂಪದಲ್ಲಿ ಆಯೋಗಕ್ಕೆ ಸಂದಾಯ ಮಾಡತಕ್ಕುದು.

(2) ಆಯೋಗವು, ಈ ಅಧಿನಿಯಮದ ಮೇರೆಗಿನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ತಾನು ಯುಕ್ತವೆಂದು ಯೋಚಿಸುವಷ್ಟು ಮೊತ್ತಗಳನ್ನು ಖರ್ಚು ಮಾಡಬಹುದು, ಮತ್ತು ಅಂಥ ಮೊತ್ತಗಳನ್ನು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅನುದಾನಗಳಿಂದ ಸಂದಾಯ ಮಾಡಬಹುದಾದ ವೆಚ್ಚವೆಂಬುದಾಗಿ ಪರಿಗಣಿಸತಕ್ಕುದು.

12. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ:- (1) ಆಯೋಗವು, ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಸಂಬಂಧಪಟ್ಟ ಇತರ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕುದು ಮತ್ತು ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಪತ್ರವನ್ನು ಸಿದ್ಧಪಡಿಸತಕ್ಕುದು.

(2) ಆಯೋಗದ ಲೆಕ್ಕಪತ್ರಗಳನ್ನು ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು, ತಾನು ನಿರ್ದಿಷ್ಟಪಡಿಸಬಹುದಾದ ಅವಧಿಯ ಅಂತರಗಳಲ್ಲಿ ಲೆಕ್ಕ ಪರಿಶೋಧನೆ ಮಾಡತಕ್ಕುದು ಮತ್ತು ಅಂಥ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ವಹಿಸಲಾದ ಯಾವುದೇ ವೆಚ್ಚವನ್ನು ಆಯೋಗವು, ನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನಿಗೆ ಸಂದಾಯ ಮಾಡತಕ್ಕುದು.

(3) ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಮತ್ತು ಈ ಅಧಿನಿಯಮದ ಮೇರೆಗೆ ಆಯೋಗದ ಲೆಕ್ಕ ಪತ್ರಗಳ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಅವನು ನೇಮಿಸಿದ ಯಾರೇ ವ್ಯಕ್ತಿಯು, ಸರ್ಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಸಾಮಾನ್ಯವಾಗಿ ಲೆಕ್ಕಪರಿಶೋಧನೆ ಮಾಡುವ ಸಂಬಂಧದಲ್ಲಿ ಹೊಂದಿರುವಂಥವೇ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಹೊಂದಿರತಕ್ಕುದು ಮತ್ತು, ವಿಶೇಷವಾಗಿ, ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಿಸಿದ ವೋಚರುಗಳನ್ನು ಮತ್ತು ಇತರೆ ದಸ್ತಾವೇಜುಗಳನ್ನು ಮತ್ತು ಕಾಗದಪತ್ರಗಳನ್ನು ಹಾಜರುಪಡಿಸುವಂತೆ ಒತ್ತಾಯಿಸುವ ಮತ್ತು ಆಯೋಗದ ಯಾವುದೇ ಕಚೇರಿಗಳನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕುದು.

(4) ನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನು ಅಥವಾ ಈ ಸಂಬಂಧವಾಗಿ ಅವನು ನೇಮಕ ಮಾಡಿದ ಯಾರೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದ ಆಯೋಗದ ಲೆಕ್ಕಪತ್ರಗಳನ್ನು ಹಾಗೂ ಅದರ ಮೇಲಿನ ಲೆಕ್ಕಪರಿಶೋಧನಾ ವರದಿಯನ್ನು, ಆಯೋಗವು ಕೇಂದ್ರ ಸರ್ಕಾರಕ್ಕೆ ಪ್ರತಿ ವರ್ಷವೂ ಕಳುಹಿಸಿ ಕೊಡತಕ್ಕುದು.

13. ವಾರ್ಷಿಕ ವರದಿ:- ಆಯೋಗವು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿ ನಡೆದ ತನ್ನ ಕಾರ್ಯಚಟುವಟಿಕೆಗಳ ಪೂರ್ಣ ವಿವರದೊಂದಿಗೆ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕುದು ಮತ್ತು ಅದರ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡತಕ್ಕುದು.

14. ವಾರ್ಷಿಕ ವರದಿಯನ್ನು ಮತ್ತು ಲೆಕ್ಕ ಪರಿಶೋಧನಾ ವರದಿಯನ್ನು ಸಂಸತ್ತಿನ ಮುಂದೆ ಮಂಡಿಸುವುದು:- ಕೇಂದ್ರ ಸರ್ಕಾರವು ವಾರ್ಷಿಕ ವರದಿಯನ್ನು, ಮತ್ತು ಅದರೊಂದಿಗೆ ಅದರಲ್ಲಿ ಒಳಗೊಂಡಿರುವ ಶಿಫಾರಸುಗಳು ಕೇಂದ್ರ ಸರ್ಕಾರಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಅವುಗಳ ಮೇಲೆ ಕೈಕೊಂಡ ಕ್ರಮದ ಜ್ಞಾಪನ ಪತ್ರವನ್ನು, ಮತ್ತು ಅಂಥ ಶಿಫಾರಸುಗಳ ಪೈಕಿ ಯಾವುದೇ ಶಿಫಾರಸನ್ನು ಒಪ್ಪಿಕೊಳ್ಳದಿರುವುದಕ್ಕೆ ಕಾರಣಗಳು ಏನಾದರೂ ಇದ್ದರೆ ಆ ಕಾರಣಗಳನ್ನು ಮತ್ತು ಲೆಕ್ಕ ಪರಿಶೋಧನಾ ವರದಿಯನ್ನು ಆ ವರದಿಗಳನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕುದು.

## ಅಧ್ಯಾಯ - V

## ಸಂಕೀರ್ಣ

15. ಆಯೋಗದ ಅಧ್ಯಕ್ಷರು, ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಲೋಕ ನೌಕರರಾಗಿರುವುದು:- ಆಯೋಗದ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಮತ್ತು ಇತರ ನೌಕರರನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರರೆಂಬುದಾಗಿ ಭಾವಿಸತಕ್ಕುದು.

16. ಕೇಂದ್ರ ಸರ್ಕಾರವು ಆಯೋಗದೊಡನೆ ಸಮಾಲೋಚಿಸುವುದು:- ಕೇಂದ್ರ ಸರ್ಕಾರವು, ಮಹಿಳೆಯರಿಗೆ ಸಂಬಂಧಪಡುವ ಎಲ್ಲ ಮುಖ್ಯ ಕಾರ್ಯನೀತಿಗಳ ವಿಷಯಗಳ ಬಗ್ಗೆ ಆಯೋಗದೊಡನೆ ಸಮಾಲೋಚನೆ ಮಾಡತಕ್ಕುದು.

17. ನಿಯಮ ರಚನಾಧಿಕಾರ:- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ನಿಯಮಗಳನ್ನು ರಚಿಸತಕ್ಕುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:-

(ಎ) 4ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಮತ್ತು 5ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು, ಮತ್ತು ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಬಿ) 8ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸಹ- ಸದಸ್ಯರಾಗಿ ಸೇರಿಸಿಕೊಳ್ಳಲಾದ ವ್ಯಕ್ತಿಗಳು ಸಮಿತಿ ಸಭೆಗಳಿಗೆ ಹಾಜರಾಗಿದ್ದಕ್ಕಾಗಿ ಭತ್ಯೆಗಳು;

(ಸಿ) 10ನೇ ಪ್ರಕರಣದ (4)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗಿನ ಇತರ ವಿಷಯಗಳು;

(ಡಿ) 12ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಾರ್ಷಿಕ ಲೆಕ್ಕಪತ್ರಗಳನ್ನು ಇಡಬೇಕಾದ ನಮೂನೆ;

(ಇ) 13ನೇ ಪ್ರಕರಣದ ಮೇರೆಗೆ ಸಿದ್ಧಪಡಿಸಬೇಕಾದ ವಾರ್ಷಿಕ ವರದಿಯ ನಮೂನೆ ಮತ್ತು ಅವಧಿ;

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು 30 ದಿನಗಳ ಅವಧಿಯವರೆಗೆ ಇರಿಸತಕ್ಕುದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನ ಅಥವಾ ಅದಕ್ಕೆ ನಿಕಟ ತರುವಾಯದ ಅಧಿವೇಶನ ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದರೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

*   *   *

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು - ಕಾ.ಸೂ. ಪಿ-777 / ಎಲ್‌ಎ- ಪಿ11